**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

ಎಸ್. ಸಿ. ನಂ. **27/2022**

ಪಿ ಡಬ್ಲ್ಯೂ **7**

ಸಿ ಡಬ್ಲ್ಯೂ **7**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಮದೇವ ಬೋಳಿ |
| ತಂದೆಯ ಹೆಸರು | : | ಮಹಾದೇವಪ್ಪ |
| ವಯಸ್ಸು | : | 37 ವರ್ಷಗಳು |
| ಉದ್ಯೋಗ | : | ಕಾರ್ಮಿಕ |
| ವಾಸಸ್ಥಳ | : | ಮೇದಾರ ಓಣಿ ಧಾರವಾಡ |

ದಿನಾಂಕಃ17-09-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸುಮಾರು 2-3 ವರ್ಷಗಳ ಹಿಂದೆ ಗೊಲ್ಲರ ಕಾಲನಿಯಲ್ಲಿರುವ ನಮ್ಮ ಮನೆಯ ಹತ್ತಿರ ಪೋಲೀಸರು ನನ್ನನ್ನು ನಿಲ್ಲಿಸಿ ಒಂದು ಪೋಟೋ ತೆಗೆದು ಸಹಿ ಪಡೆದಿದ್ದಾರೆ. ಯಾವ ವಸ್ತುವನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹಾಜರುಪಡಿಸಿದ ವ್ಯಕ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ಪಂಚನಾಮೆಯಲ್ಲಿರುವ ಸಹಿ ನನ್ನದು. ಜಪ್ತು ಪಂಚನಾಮೆ ನಿಶಾನೆ ಪಿ-8 ಎಂದು ನನ್ನ ಸಹಿ ನಿಶಾನೆ ಪಿ 8(ಬಿ) ಎಂದು ಗುರ್ತಿಸಲಾಯಿತು. ಈಗ ನನಗೆ ತೋರಿಸಿದ ಪೋಟೋದಲ್ಲಿ ನಾನು ಇರುತ್ತೇನೆ. ಸದರಿ ಪೋಟೋಗಳನ್ನು ನಿಶಾನೆ ಪಿ 9 ಮತ್ತು ನಿಶಾನೆ ಪಿ 10 ಎಂದು ಈಗಾಗಲೇ ಗುರ್ತಿಸಲಾಗಿದೆ. ಅದನ್ನು ಮನೆಯಲ್ಲಿ ತೆಗೆದಿದ್ದಾರೆ. ಯಾರ ಮನೆಯಲ್ಲಿ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನಾನು ಯಾವತ್ತು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:**

ದಿಃ23-02-2022 ರಂದು ಧಾರವಾಡ ಶಹರ ಪೋಲೀಸ ಠಾಣೆಗೆ ನನ್ನನ್ನು ಮತ್ತು ಚಾಸಾ-6 ರವರನ್ನು ಠಾಣೆಗೆ ಕರೆಸಿ ಠಾಣೆಯಲ್ಲಿ ಇದ್ದ ಆರೋಪಿಯು ಏನೋ ತೋರಿಸುತ್ತಾನೆಂದು ಆತನ ಜೊತೆ ಬರಲು ನಮ್ಮನ್ನು ಕರೆದಿದ್ದು ಆರೋಪಿಯು ನಮ್ಮನ್ನು ಮತ್ತು ಪೋಲೀಸರನ್ನು ಮೇದಾರ ಓಣಿಯ ಶುಕ್ಲಾ ಚಾಳದಲ್ಲಿರುವ ತನ್ನ ಬಾಡಿಗೆಯ ಮನೆಗೆ ಕರೆದುಕೊಂಡು ಹೋಗಿದ್ದು ಹಾಲ್ ನಲ್ಲಿ ಬಟ್ಟೆಯಲ್ಲಿ ಮುಚ್ಚಿಟ್ಟಿದ್ದ ಚಾಕುವನ್ನು ಹಾಜರುಪಡಿಸಿದ್ದು ಸದರಿ ಚಾಕುವನ್ನು ನೋಡಲಾಗಿ ಒಂದು ಪ್ಲಾಸ್ಟಿಕ ಕೈ-ಹಿಡಿಕೆಯ ಚಾಕು ಆಗಿದ್ದು ಸ್ಥಳದಲ್ಲಿ ಪ್ಯಾಕ ಮಾಡಿ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಿಶಾನೆ ಪಿ 8 ಪಂಚನಾಮೆಯನ್ನು ಬರೆದು ನನ್ನ ಸಹಿ ಪಡೆದು ನಿಶಾನೆ ಪಿ 9 ಮತ್ತು 10 ರ ಪ್ರಕಾರ ಪೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯೆ ಚಾಕುವನ್ನು ಹಾಜರುಪಡಿಸಿದ್ದಾ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಬಿ.ಎನ ವಕೀಲರಿಂದ ಅವರ ಹಿರಿಯ ವಕೀಲರಾದ ಶ್ರೀ ಎಂ.ಎಂ.ಕೆ ವಕೀಲರ ಪರವಾಗಿ :</u>

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ:</u> ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.